ಗ್ಲಾಸ್ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಖಾಸಗೀ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ನೌಕರರ ಮಾಹಿತಿ ನಮಗೆ ಬಂದಿಲ್ಲ. ಕೆಲಸ ಮಾಡುವಂಥ ನೌಕರರು ಎಷ್ಟು ಎನ್ನುವುದು ಕಾರ್ಮಿಕ ಇಲಾಖೆಯಲ್ಲಿರುತ್ತದೆ. ಯೂನಿಟ್‌ಗಳನ್ನು ಮುಚ್ಚಿದ್ದನ್ನೂ ತಿಳಿಸಬೇಕು. ಇಲ್ಲದಿದ್ದರೆ ಅಧಿಕೃತವಾಗಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಸ್ವಾಮಿ, ಎರಡು ವರ್ಷಗಳಿಂದ ಮುಚ್ಚಿದ್ದಾರೆ. ಅಜಿಟೇಷನ್ ಕೂಡ ಆಯಿತು. ಮಾಹಿತಿ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಕಾರ್ಮಿಕರಿಗೆ ಯಾವಾಗ ಕೆಲಸ ಕೊಡುತ್ತೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ಅಲೆಂಬಿಕ್ ಗ್ಲಾಸ್ ಕಾರ್ಖಾನೆಯನ್ನು ಪ್ರಾರಂಭಿಸುವುದಕ್ಕೆ ಎಷ್ಟು ಪ್ರಯತ್ನಪಟ್ಟರೂ ಅದರ ಮಾಲೀಕರು ಸಿಗುತ್ತಿಲ್ಲ. ಸರ್ಕಾರಕ್ಕೂ ಹೇಳದೆ ಯಾರಿಗೂ ಹೇಳದೆ ಹೋಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಎಲ್ಲಿಗೆ ಹೋಗಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಎಲ್ಲಿಗೆ ಹೋದರೂ ಎಂದು ಹುಡುಕಿಸಬೇಕಾಗಿದೆ. ಕಾನೂನು ಪ್ರಕಾರ ರೆಕಗ್‌ನೈಸ್ ಮಾಡುವುದಕ್ಕಾಗುವುದಿಲ್ಲ.

## ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ

೯೩೨. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಈ ವರ್ಷದಲ್ಲಿ ಎಷ್ಟು ಮಂದಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲವನ್ನು ಕೊಡಲಾಗಿದೆ ಮತ್ತು ಮೈಸೂರು ನಗರದಲ್ಲಿ ಎಷ್ಟು ಮಂದಿಗೆ ಕೊಡಲಾಗಿದೆ.

(ಆ) ಕೊಟ್ಟಿರುವವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರು ಎಷ್ಟು ?

(ಇ) ಮಂಜೂರಾಗಿರುವವರಿಗೆಲ್ಲ ಬ್ಯಾಂಕುಗಳಿಂದ ಸಾಲ ಒದಗಿಸಲು ಜಿಲ್ಲಾ ಕೈಗಾರಿಕಾ ಕೇಂದ್ರವು ಏನು ಕ್ರಮ ಕೈಗೊಂಡಿದೆ.

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ಫೆಬ್ರುವರಿ ಅಂತ್ಯದವರೆಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಯಾರಿಗೂ ಸಾಲವನ್ನು ಕೊಟ್ಟಿರುವುದಿಲ್ಲ.

(ಆ) ಮೇಲೆ ತಿಳಿಸಿರುವ ಕಾರಣ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

(ಇ) ಅರ್ಜಿಗಳನ್ನು ವಿವಿಧ ಬ್ಯಾಂಕುಗಳಿಗೆ ಕಳುಹಿಸಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.— ನಾನು ಕೇಳಿದ ಮೂರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗಾದರೂ ಉತ್ತರವನ್ನು ಕೊಡತಕ್ಕ ಸೌಜನ್ಯವನ್ನು ಮಾನ್ಯ ಸಚಿವರು ತೋರಿಸಿದ್ದಾರೆ. ಅದಕ್ಕೆ ನಾನು ಕೃತಜ್ಞನಾಗಿದ್ದೇನೆ. ನನ್ನ ಮೂರನೆಯ ಪ್ರಶ್ನೆಗೆ ಅರ್ಜಿಗಳನ್ನು ವಿವಿಧ ಬ್ಯಾಂಕುಗಳಿಗೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಒಟ್ಟು ಎಷ್ಟು ಅರ್ಜಿಗಳನ್ನು ಕಳುಹಿಸಲಾಗಿದೆ. ಅದರಲ್ಲಿ ಪರಿಶಿಷ್ಟ ಜಾತಿ ಎಷ್ಟು, ಪರಿಶಿಷ್ಟ ಪಂಗಡ ಎಷ್ಟು ಹಾಗೂ ಇತರೇ ಅರ್ಜಿಗಳು ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ಪೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಪೆಡ್ಯೂಲ್ಡ್ ಟ್ರೈಬ್ಸ್‌ನವರಿಂದ ೨೩೮ ಅರ್ಜಿಗಳು ಬಂದಿವೆ. ಬ್ಯಾಕ್‌ವರ್ಡ್ ಕಮ್ಯುನಿಟೀಸ್‌ರವರಿಂದ ೩೬೨ ಅರ್ಜಿಗಳು ಬಂದಿದೆ. ಬ್ಯಾಕ್‌ವರ್ಡ್ ಕ್ಲಾಸ್‌ನವರಿಂದ ೫೭ ಅರ್ಜಿಗಳು ಬಂದಿದೆ. ಇದು ಹಿಂದಿನ ಕ್ಲಾಸಿಫಿಕೇಷನ್ ಪ್ರಕಾರ ಈಗಿನ ಕ್ಲಾಸಿಫಿಕೇಷನ್ ಪ್ರಕಾರ ಅಲ್ಲ. ಬೇರೆಯವರದು ೧೨೮ ಅರ್ಜಿಗಳು ಬಂದಿದೆ. ಇದರ ಬಗ್ಗೆ ಎಲ್ಲಾ ಸೇರಿ ಒಟ್ಟು ೧,೧೧೭ ಅರ್ಜಿಗಳನ್ನು ರೆಕಮಂಡ್ ಮಾಡಲಾಗಿದೆ.

ಶ್ರೀ ವೇದಾಂತ ಹೆವಿಮ್ಮಿಗೆ.—ಸ್ವಯಂ ಉದ್ಯೋಗಕ್ಕೆ ಅರ್ಜಿ ಹಾಕಬೇಕಾದರೆ ಯಾರು ಐ. ಟಿ. ಐ. ಇಂತಾದ್ದರಲ್ಲಿ ಪಾಸ್ ಮಾಡಿರುತ್ತಾರೆ. ಅಂತಹವರು ಇದರಲ್ಲಿ ಅರ್ಜಿ ಹಾಕುತ್ತಾರೆ. ಮೈಸೂರು ನಗರದ ಎರಡು ಮೂರು ಶಾಸನ ಸಭಾ ಕ್ಷೇತ್ರಗಳಲ್ಲಿ ವಿತರಣೆ ಮಾಡುವಾಗ, ನಿಮ್ಮ ಅಧಿಕಾರಿಗಳು ಯಾರು ಇದ್ದಾರೆ, ಅವರ ಅಭಿಪ್ರಾಯವನ್ನು ಕೇಳತಕ್ಕೆ ವ್ಯವಸ್ಥೆ ಏನಾದರೂ ಮಾಡಿದ್ದೀರಾ ? ಅಥವಾ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈಗ ಇರುವ ವ್ಯವಸ್ಥೆ ಅದೇ ತರಹ ಇದೆ.

ಶ್ರೀ ವೇದಾಂತ ಹೆವಿಮ್ಮಿಗೆ.—ಅಧ್ಯಕ್ಷರೆ ..

ಅಧ್ಯಕ್ಷರು.—ಸಪ್ಲಿಮೆಂಟರಿ ಎರಡಕ್ಕಿಂತಲೂ ಹೆಚ್ಚಿಗೆ ಯಾರಿಗೂ ಕೊಡುವುದಿಲ್ಲ.

ಶ್ರೀ ವೇದಾಂತ ಹೆವಿಮ್ಮಿಗೆ.—ಅಧ್ಯಕ್ಷರೇ ಇದು ಬಹಳ ಮುಖ್ಯ ಪ್ರಶ್ನೆ ಇದೆ...

ಅಧ್ಯಕ್ಷರು.—ನಾನು ನಿಮಗೆ ಮೂರು ಸಾರಿ ಕೇಳಲಿಕ್ಕೆ ಅವಕಾಶ ಕೊಟ್ಟರೆ, ಮತ್ತೊಬ್ಬ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆವಿಮ್ಮಿಗೆ.—ಇದು ಒಂದು ಕಡೇ ಪ್ರಶ್ನೆ ಕೇಳುತ್ತೇನೆ.....

ಅಧ್ಯಕ್ಷರು.—ಇವೊತ್ತು ಡಿಮ್ಯಾಂಡ್ ಮೇಲೆ ಚರ್ಚೆ ಇದೆ. ೧೨ ಗಂಟೆಗೆ ಸರಿಯಾಗಿ ಇದು ಮುಗಿಯಬೇಕು. ಸಪ್ಲಿಮೆಂಟರಿ ಎರಡಕ್ಕಿಂತಲೂ ಹೆಚ್ಚಿಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ತಮಗೆ ಮೂರನೇ ಸಾರಿ ಕೇಳಲಿಕ್ಕೆ ಅವಕಾಶ ಕೊಟ್ಟರೆ, ಅನಂತರ ಈ ಕಡೆಯವರು ಕೇಳುತ್ತಾರೆ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಬೇಕು.

## ಸಿಮೆಂಟ್ ಕಾರ್ಖಾನೆಯಂ ಹೊಗೆ ಹಾಗೂ ಧೂಳಿನಿಂದಾಗುವ ಅಪಾಯ

೯೯. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಡಿ ಶಹಾಬಾದ್, ಚಿತ್ತಾಪುರ ಮತ್ತು ಸೇಡಂಗಳಲ್ಲಿ ದೊಡ್ಡ ಮತ್ತು ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳು ಇರುವುವು. ಅವುಗಳ ಧೂಳಿನಿಂದ ಮತ್ತು ಹೊಗೆಯಿಂದ ಜನರ ಆರೋಗ್ಯ ಕೆಡುತ್ತಿದ್ದು ಮತ್ತು ಬೆಳೆಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಅದರ ನಿಯಂತ್ರಣಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಬಂದಿದೆ.

(ಆ) ಎ. ಸಿ. ಸಿ. ಸಿಮೆಂಟ್ ಕಾರ್ಖಾನೆ ಶಹಾಬಾದ್ ಮತ್ತು ಕರ್ನಾಟಕ ಸಿಮೆಂಟ್ಸ್ ಲಿ. ಚಿತ್ತಾಪುರ ಈ ಕಾರ್ಖಾನೆಗಳು ವಾಯು ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ ೧೯೮೧ರ ಅಡಿಯಲ್ಲಿ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸದೇ ಇದ್ದುದರಿಂದ ಈ ಕಾರ್ಖಾನೆಗಳ ವಿರುದ್ಧ ಚಿತ್ತಾಪುರ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ.

೨. ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ (ಕುರ್ಕುಂಟಾ) ಕಾರ್ಖಾನೆಗೆ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ೩೧-೧೨-೧೯೮೭ರವರೆಗೆ ಕಾಲಾವಕಾಶ ನೀಡಲಾಗಿದೆ.

೩. ವಾಡಿಯಲ್ಲಿರುವ ಎ. ಸಿ. ಸಿ. ಸಿಮೆಂಟ್ ಕಾರ್ಖಾನೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದ ಪ್ರಕಾರ ಒಂದು ದೊಡ್ಡ ಆವಿಗೆಗೆ (ಕಿಲ್ನ್) ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದೆ. ಅದರ ಕಾರ್ಯವು ಸಮರ್ಪಕವಾಗಿದೆ. ಇನ್ನುಳಿದ ಎರಡು ಚಿಕ್ಕ ಆವಿಗೆಗಳಿಗೆ (ಕಿಲ್ನ್) ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.